ಹಂಚಿಕೊಳ್ಳಬೇಕು, ನಮ್ಮ ಜೊತೆ ಹೊಂದಿಕೊಂಡು ಹೋಗಬೇಕು, ಆಗುತ್ತಾ?' ಅಂದಾಗ ಖುಷಿಯಿಂದ ಒಪ್ಪಿಕೊಂಡಳು. ಆದರೆ ಅವರಂತೆ ಭಿಕ್ಷೆ ಬೇಡಿ ಬದುಕುವ ಮನಸ್ಸು ಸುತರಾಂ ಇರಲಿಲ್ಲ.

'ಅಕ್ಕ, ನೀವು ದಿನಾ ಭಿಕ್ಷೆ ಬೇಡುತ್ತೀರಾ?' ಅಂತ ಅವರಲ್ಲಿ ಹಿರಿಯಾಕೆಯನ್ನು ಪ್ರಶ್ನಿಸಿದಳು. 'ಮತ್ತೆ ತಿನ್ನೋಕೆ, ಬದುಕೋಕೆ ಏನು ಮಾಡೋದು, ಭಿಕ್ಷೆ ಬೇಡಲೇ ಬೇಕು, ಕೆಲಸ ಮಾಡ್ತೀವಿ ಅಂದ್ರೆ ನಮಗೆ ಯಾರು ಕೊಡ್ತಾರೆ, ಮನೆಯಿಂದಲೂ ಓಡಿಸಿದ್ದಾರೆ, ನಮ್ಮನ್ನ ನೋಡಿಕೊಳ್ಳೋರು ಯಾರು? ಕಲಾ ಹೇಳಿದಳು.

'ಭಿಕ್ಷೆ ಬೇಡೋದು ತಪ್ಪಲ್ವಾ ಅಕ್ಕ' ಎಂದು ಅವರಿಗೆ ಬೇಸರವಾಗದಂತೆ ಕೇಳಿದಳು. 'ತಪ್ಪೇ... ಆದರೆ ಏನು ಮಾಡುವುದು, ನಾವೂ ಬದುಕಬೇಕಲ್ಲ. ಮತ್ತೆ ಹೇಗೆ ಜೀವನ ನಡೆಸುವುದು?' ಅವರಿಂದಲೇ ಪ್ರಶ್ನೆ ಬಂದಿತು. ವರ್ಷಳಿಗೂ ಅಂತಹ ಪ್ರಶ್ನೆಯೇ ಬೇಕಾಗಿತ್ತು.

'ಅದನ್ನು ನಾನು ಹೇಳ್ತೀನಿ ಬನ್ನಿ, ಹೊರಗೆ ಕೂತ್ಕೊಂಡು ಮಾತನಾಡೋಣ' ಅಂತ ಹೊರಬಂದು ಅನತಿ ದೂರದಲ್ಲಿ ಖಾಲಿ ಇದ್ದ ಜಾಗದತ್ತ ನಡೆದು, ತಾನೇ ಮೊದಲು ಕುಳಿತು, ಉಳಿದವರನ್ನೂ ಕುಳಿತುಕೊಳ್ಳಲು ಹೇಳಿದಳು. ಎಲ್ಲರೂ ಅವಳ ಮುಂದೆ ಕುಳಿತರು. ಅವರಿಗೆ ತನ್ನ ಕಥೆಯನ್ನೆಲ್ಲ ಹೇಳಿ ತನ್ನನ್ನು ಸಾಕಿದ ಅಮ್ಮ ವ್ಯಾಪಾರ ಮಾಡಿ ಸಂಪಾದಿಸುತ್ತಾ ಬದುಕಿದ್ದು ತಾನೂ ಕೂಡಾ ವ್ಯಾಪಾರ ಮಾಡುತ್ತಿದ್ದು, ಈಗ ಅಮ್ಮ ಸತ್ತ ಮೇಲೆ ಅವರ ಬಂಧುಗಳು ಬಂದಿದ್ದರಿಂದ ಎಲ್ಲವನ್ನು ಬಿಟ್ಟು ಬಂದಿದ್ದು, ತಾನು ಮತ್ತೆ ಹೊಸದಾಗಿ ಬದುಕು ಪ್ರಾರಂಭಿಸಬೇಕಾಗಿದೆ. ನೀವು ಸಹಾಯ ಮಾಡಿದರೆ ಭಿಕ್ಷೆ ಬೇಡುವುದು ಬಿಟ್ಟು ಸ್ವಾಭಿಮಾನಿಗಳಾಗಿ ಬದುಕಬಹುದು ಅಂತ ಸಲಹೆ ನೀಡಿದಳು.

'ಅದು ಅಷ್ಟು ಸುಲಭ ಅಲ್ಲ, ನಾವು ವ್ಯಾಪಾರ ಮಾಡಿ ಬದುಕಲು ಸಾಧ್ಯವೇ... ನಮಗೆ ವ್ಯಾಪಾರ ಮಾಡಲು ಜಾಗ ಕೊಡುತ್ತಾರಾ, ನಮ್ಮ ಹತ್ರ ಸಾಮಾನು ತೆಗೆದುಕೊಳ್ಳುತ್ತಾರಾ, ಅದೆಲ್ಲ ಆಗದ ಹೋಗದ ಕೆಲಸ, ಮೊದಲಿಂದಲೂ ನಾವು ಏನು ಮಾಡ್ತಾ ಇದ್ವೊ ಅದನ್ನೇ ಮಾಡೋಣ' ಅಂತ ಒಂದೇ ಸಲಕ್ಕೆ ವರ್ಷಳ ಸಲಹೆಯನ್ನು ತಿರಸ್ಕರಿಸಿದಾಗ ವರ್ಷಳಿಗೆ ನಿರಾಶೆಯಾಯಿತು. ನಾನಿನ್ನು ಇವತ್ತು ಬಂದಿದ್ದೀನಿ. ಈಗಲೇ ಇವರೆಲ್ಲ ನನ್ನ ಮಾತನ್ನು ಕೇಳಲು ಅಸಾಧ್ಯ, ನಿಧಾನವಾಗಿ ಅವರು ತನ್ನ ದಾರಿಗೆ ಬಂದೇ ಬರುತ್ತಾರೆ ಅನ್ನೋ ಆತ್ಮವಿಶ್ವಾಸದಿಂದ ತನ್ನ ಪ್ರಯತ್ನಕ್ಕೆ ತಾತ್ಕಾಲಿಕವಾಗಿ ಕಡಿವಾಣ ಹಾಕಿಕೊಂಡಳು. ಅಷ್ಟರಲ್ಲಿ ಕಾಮಿನಿ 'ನೀನು ಇಲ್ಲೇ ಇರು ಇವತ್ತು. ನಾಳೆಯಿಂದ ನಮ್ಮ ಜೊತೆ ಬರುವಿಯಂತೆ. ನಾವು ಬರುವಷ್ಟರಲ್ಲಿ ಅಂಬಿಕನ ಜೊತೆ ಸೇರಿಕೊಂಡು ಅಡುಗೆ ಮಾಡಿಬಿಡು' ಎಂದವಳು, 'ಬನ್ರೆ ಹೋಗೋಣ' ಅಂತ ಹೇಳಿ ಎಲ್ಲರನ್ನು ಕರೆದುಕೊಂಡು ಹೊರಟಳು.

ಅವರು ಹೋಗುವತ್ತಲೇ ನೋಡುತ್ತಾ ವರ್ಷ ಮುಂದಿನ ಚಿಂತೆಯಲ್ಲಿ ಮುಳುಗಿದಳು. ಅವಳನ್ನು ನೋಡಿ ಅಂಬಿಕ 'ನಿನಗೆ ಭಿಕ್ಷೆ ಬೇಡೋದು ಇಷ್ಟ ಇಲ್ಲ ಅಲ್ವಾ, ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದೀಯಾ ಅಂತ ಗೊತ್ತಾಗ್ತಾ ಇದೆ, ನೋಡೋಣ ಬಿಡು, ನೀನು ನಮ್ಮ ಜೊತೆ ಬರೋದು ಬೇಡ, ನೀನು ನಿನ್ನ ಆಲೋಚನೆ ಏನು ಇದೆಯೋ ಹಾಗೆ ಮಾಡು, ಹೇಗೂ ನಿನಗೆ ವ್ಯಾಪಾರದಲ್ಲಿ ಅನುಭವ ಇದೆ, ಇಲ್ಲೇನು ಮಾಡಬಹುದೊ ಯೋಚನೆ ಮಾಡು, ನಾನು ನಿನಗೆ ಸಪೋರ್ಟ್ ಮಾಡುತ್ತೇನೆ. ಬಾ ಈಗ, ಅಡುಗೆ ಮಾಡೋಣ' ಅಂತ ಅವಳು ಹೇಳಿದಾಗ ಭರವಸೆ ಮೂಡಿಸಿದ ಅಂಬಿಕಳ ಕೈಯನ್ನು ಕೃತಜ್ಞತೆಯಿಂದ ಹಿಡಿದುಕೊಂಡಳು. ಇಡೀ ದಿನ ಆಸರೆ ಸಿಕ್ಕಿದ ನೆಮ್ಮದಿ ಇದ್ದರೂ, ಮುಂದೇನು ಅನ್ನೊ ಚಿಂತೆಯಲ್ಲಿ ಇಡೀ ರಾತ್ರಿ ನಿದ್ದೆ ಬರಲಿಲ್ಲ.

ಬೆಳಿಗ್ಗೆ ಅವರೆಲ್ಲ ಅಲಂಕರಿಸಿಕೊಂಡು ಹೊರಟಾಗ ವರ್ಷ ಕೂಡಾ ಹೊರಟಳು. ಆದರೆ ಅವಳು ಅವರ ಜೊತೆ ಹೋಗದೆ ನಿನ್ನೆ ಊಟ ಮಾಡಿದ್ದ ಹೋಟೆಲಿನ ಮುಂದೆ ನಿಂತುಕೊಂಡಳು. ಯಾಕೆ ಎಂಬಂತೆ ಎಲ್ಲರೂ ನಿಂತು ಅವಳನ್ನು ಕೇಳಿದಾಗ, ಅಂಬಿಕಾ 'ಅವಳಿಗೆ ಭಿಕ್ಷೆ ಬೇಡೋಕೆ ಇಷ್ಟ ಇಲ್ಲ ಬಿಡಿ, ಅದೇನು ಮಾಡುತ್ತಾಳೊ ಮಾಡಿಕೊಳ್ಳಲಿ, ನಾವು ಹೋಗೋಣ' ಅಂತ ಹೇಳಿ ವರ್ಷಳನ್ನು ಅಲ್ಲಿಯೇ ಬಿಟ್ಟು, ತನ್ನವರನ್ನು ಹೊರಡಿಸಿಕೊಂಡು ಹೊರಟಳು. ಅವರೆಲ್ಲ ತಿರುಗಿ, ತಿರುಗಿ ವರ್ಷಳನ್ನೇ ನೋಡುತ್ತಾ ಅನುಮಾನದಿಂದಲೇ ಹೋದರು. ಸ್ವಲ್ಪ ಹೊತ್ತು ಅವರನ್ನೇ ನೋಡುತ್ತಾ ನಿಂತಿದ್ದ ವರ್ಷ ನಿಧಾನವಾಗಿ ಹೋಟೆಲಿನ ಪಕ್ಕ ಇದ್ದ ಅಂಗಡಿಗೆ ಹೋಗಿ ಹತ್ತು ನೀರಿನ ಬಾಟಲಿ, ಹತ್ತು ಚಿಪ್ಸ್ ಕವರ್ ಕೊಂಡು ರಸ್ತೆಯ ಮಧ್ಯಕ್ಕೆ ಬಂದಳು, ಟೋಲ್ ಗೇಟ್ ಹತ್ತಿರ ಒಂದರ ಹಿಂದೆ ಒಂದು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಒಂದೊಂದು ವಾಹನದ ಬಳಿಯೂ ನಿಂತು ಕಿಟಕಿಯ ಬಳಿ ನೀರು, ನೀರು, ಚಿಪ್ಸ್ ಚಿಪ್ಸ್ ಅಂತ ಕೂಗುತ್ತಾ ವಾಹನದಿಂದ ವಾಹನಕ್ಕೆ ಓಡಾಡಿದಳು. ಯಾರೊಬ್ಬರೂ ಅವಳಿಂದ ಕೊಳ್ಳಲಿಲ್ಲ. ಬೇಸರವಾದರೂ ಪ್ರಯತ್ನ ಬಿಡಲಿಲ್ಲ. ಕಾರೊಂದರ ಬಳಿ ಬಂದು ಮುಚ್ಚಿದ್ದ ಗ್ಲಾಸನ್ನು ಬಡಿದು ನೀರು, ಚಿಪ್ಸ್ ತಗೊಳಿ ಅಂತ ಕೇಳಿದಳು. ಮೆಲ್ಲನೆ ಮುಚ್ಚಿದ್ದ ಗ್ಲಾಸ್ ಕೆಳಗಿಳಿಯಿತು. ಅವಳು ಕೇಳಿಕೊಂಡದ್ದಕ್ಕೋ ಏನೋ ಕಾರಿನಲ್ಲಿ ಕುಳಿತವರು ಎರಡು ನೀರಿನ ಬಾಟಲಿ ಕೊಂಡುಕೊಂಡು ಹಣ ನೀಡಿದರು. ಆ ಕ್ಷಣಕ್ಕೆ ಭರವಸೆಯ ಬೆಳಕು ಮಿಂಚಿದಂತಾಗಿ ತುಟಿ ಮೇಲೆ ನಗು ಅರಳಿತು. ಸಂಜೆ ವೇಳೆಗೆ ಎರಡು ಚಿಪ್ಸ್ ಪ್ಯಾಕೆಟ್, ಒಂದು ನೀರಿನ ಬಾಟಲಿ ಉಳಿಯಿತು. ಕೈಯಲ್ಲಿ ಆವತ್ತಿನ ದುಡಿಮೆ ಹಿಡಿದುಕೊಂಡು ತೃಪ್ತಿಯಿಂದ ಮನೆಯತ್ತ ನಡೆದಳು. 'ಎಷ್ಟಮ್ಮ ಇವತ್ತಿನ ನಿನ್ನ ದುಡಿಮೆ?' ಅಂತ ಅವಳ ಕೈಯಲ್ಲಿದ್ದ ಚಿಲ್ಲರೆ ಹಣ ನೋಡಿ ನಕ್ಕರು ಅಲ್ಲಿದ್ದವರು. 'ಒಂದು ತಿಂಡಿಗೂ ಹಣ ಸಾಕಾಕ್ತಾ ಇಲ್ಲವಲ್ಲ, ಇದೆಲ್ಲ ಬೇಡ, ನಾಳೆಯಿಂದ ನಮ್ಮ ಜೊತೆ ಬಾ, ಕೈ ತುಂಬಾ ಸಂಪಾದನೆ ಮಾಡಬಹುದು' ಅಂದಾಗ ವರ್ಷಳಿಗೆ ಉತ್ತರಿಸಲಾಗಲಿಲ್ಲ. ಸುಮ್ಮನೆ ನಕ್ಕಳಷ್ಟೆ.

ಆದರೆ ಮಾರನೇ ದಿನ ಅವಳ ನಿರ್ಧಾರ ಮತ್ತಷ್ಟು ಗಟ್ಟಿಯಾಗಿತ್ತು. ನಿನ್ನೆ ಉಳಿದ ಚಿಪ್ಸ್ ಪ್ಯಾಕೆಟ್ ಮತ್ತು ನೀರಿನ ಬಾಟಲಿ ಜೊತೆಗೆ ಹತ್ತು ನೀರಿನ ಬಾಟಲಿ ಮತ್ತು ಚಿಪ್ಸ್ ಪ್ಯಾಕೆಟ್ ಕೊಂಡುಕೊಂಡು ಒಂದು ಬ್ಯಾಗಿನಲ್ಲಿ ಇರಿಸಿಕೊಂಡು ವಾಹನಗಳು ನಿಲ್ಲುತ್ತಿದ್ದ ಜಾಗಕ್ಕೆ ಬಂದು ಪ್ರತಿಯೊಂದು ವಾಹನದತ್ತ ನಿಂತು ನೀರು ನೀರು, ಚಿಪ್ಸ್ ಚಿಪ್ಸ್ ಅಂತ ಕೂಗುತ್ತಾ ವಿನಯವಾಗಿ

## ಕಳೆದ ಸಂಚಿಕೆಯಲ್ಲಿ



ಮಗ ಹೆಣ್ಣಿಗನಂತೆ ವರ್ತಿಸುವುದನ್ನು ಏನು ಮಾಡಿದರೂ ಬದಲಿಸಲಾಗದೆ ಹೋದಾಗ ವಾರಿಜಳ ಮನಸ್ಸು ಸೋತುಹೋಯಿತು. ನೀರು ತರಲೆಂದು ಹೊಳೆಗೆ ಹೋದವಳು ಹಿಂತಿರುಗಿ ಬರಲೇ ಇಲ್ಲ. ನಿರ್ಜೀವವಾಗಿ ದೊರೆತ ಅಮ್ಮನ ದೇಹವನ್ನು ನೋಡಿ ವೀರುವಿನ ಮನಸ್ಸು ಒದ್ದಾಡಿಹೋಯಿತು. ಯಾರೂ ಬಾಯಿ ಬಿಟ್ಟು ಹೇಳದೆ ಹೋದರೂ, ಅಮ್ಮನ ಸಾವಿಗೆ ತಾನೇ ಕಾರಣ ಎನ್ನುವುದು ವೀರುವಿನ ಮನಸ್ಸಿಗೆ ಖಚಿತವಾಗಿ ಗೊತ್ತಿತ್ತು. ಆ ರಾತ್ರಿ ವೀರು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದ. ಹೊಳೆಯ ನೀರು ಅವನನ್ನು ಮುಳುಗಿಸದೆ, ಯಾವುದೋ ಊರಿಗೆ ಕರೆದೊಯ್ದು ತೇಲಿಸಿತು. ಅಲ್ಲಿ ವಸಂತಮ್ಮನ ಆಸರೆ ದೊರೆಯಿತು. ವೀರುವಿನಂತೆಯೇ ವಸಂತಮ್ಮನೂ ಗಂಡಾಗಿ ಹುಟ್ಟಿದ್ದರೂ, ತನ್ನೊಳಗಿನ ಹೆಣ್ಣಿನ ದನಿಗೆ ಓಗೊಟ್ಟು ನಾನಾ ತೊಂದರೆ ಅನುಭವಿಸಬೇಕಾಯಿತು. ಕೊನೆಗೆ ಮನೆ ಬಿಟ್ಟು ಬಂದ ವಸಂತ, ಕಾಣದ ಊರಿನಲ್ಲಿ ನೆಲೆ ಕಂಡುಕೊಂಡಳು. ಸಣ್ಣ ಪುಟ್ಟ ಕೆಲಸ ಮಾಡುತ್ತಾ, ಅಂಗಡಿ ನಡೆಸುವ ಮಟ್ಟಕ್ಕೆ ಬೆಳೆದಳು. ತಂಗಿ ತಮ್ಮಂದಿರ ಬದುಕಿಗೆ ಆಸರೆಯಾದಳು. ಅಪ್ಪ–ಅಮ್ಮನ ಕೊನೆಯ ದಿನಗಳ ನೆಮ್ಮದಿಗೆ ಕಾರಣಳಾದಳು. ಇಂಥ ವಸಂತಮ್ಮನ ಆಸರೆಯಲ್ಲಿ ವೀರುವಿನ ಹೊಸ ಬದುಕು ಆರಂಭವಾಯಿತು. ವೀರುವಿನಲ್ಲಿ ವರ್ಷ ಅಂಕುರಿಸಿದಳು.